ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಇತರ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 17/9/19


# ಆಂಧ್ರ ಮಾಜಿ ಸ್ಪೀಕರ್ ರಾವ್ ಆತ್ಮಹತ್ಯೆ

## ಜಗನ್ ಸರಕಾರ ಕಳ್ಳತನದ ಆರೋಪ ಹೊರಿಸಿದ್ದೇ ಕಾರಣ: ಟಿಡಿಪಿ

**ಹೈದರಾಬಾದ್:** ಆಂಧ್ರಪ್ರದೇಶ ವಿಧಾನಸಭೆ ಮಾಜಿ ಸ್ಪೀಕರ್ ಹಾಗೂ ತೆಲುಗು ದೇಶಂ ಪಕ್ಷದ ಹಿರಿಯ ಮುಖಂಡ ಡಾ.ಕೋಡೆಲಾ ಶಿವಪ್ರಸಾದ ರಾವ್ ಅವರು ಹೈದರಾಬಾದ್‌ನ ತಮ್ಮ ನಿವಾಸದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಶಿವಪ್ರಸಾದ ರಾವ್ (72) ಅವರು ಸೋಮವಾರ ಬೆಳಗ್ಗೆ 9ರ ಸುಮಾರಿಗೆ ತಮ್ಮ ನಿವಾಸದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ತಕ್ಷಣವೇ ಕುಟುಂಬ ಸದಸ್ಯರು ಅವರನ್ನು ಜುಬಿಲಿ ಹಿಲ್ಸ್ ಪ್ರದೇಶದ ಬಸವ ತಾರಕಂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ದರು. ತೀವ್ರವಾಗಿ ಅಸ್ವಸ್ಥಗೊಂಡಿದ್ದ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಿ ಚಿಕಿತ್ಸೆ ನೀಡಲಾಯಿತು. ಸೋಮವಾರ ಮಧ್ಯಾಹ್ನ 12.30ರಸುಮಾರಿಗೆರಾವ್‌ಕೊನೆಯುಸಿರೆಳೆದರು. ಈ ಆಸ್ಪತ್ರೆಯನ್ನು ನಟ ಬಾಲಕೃಷ್ಣ ಜತೆಗೂಡಿ ರಾವ್ ಅವರೇ ಆರಂಭಿಸಿದ್ದಾರೆ.

''ತಂದೆ ಬಹುದಿನಗಳಿಂದ ಲವಲವಿಕೆ ಕಳೆದುಕೊಂಡಿದ್ದರು. ಸೋಮವಾರ ಬೆಳಗ್ಗೆ 9 ಗಂಟೆಗೆ ತಿಂಡಿ ತಿಂದು ಮೊದಲ ಮಹಡಿಗೆ ತೆರಳಿದರು. ತುಸು ಹೆಚ್ಚಾಗಿಯೇ ಮಂಕಾಗಿದ್ದ ಅವರು ತಮ್ಮ ಬೆಡ್ ರೂಮ್ ಸೇರಿದ ಬಳಿಕ ಒಂದು ತಾಸಾದರೂ ಹೊರ ಬರಲಿಲ್ಲ. ಸಂಶಯದಿಂದ ನಾನು ಅವರ ರೂಮಿಗೆ ಹೋಗಿ ನೋಡಿದಾಗ ಆಘಾತ ಕಾದಿತ್ತು. ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದರು. ತಕ್ಷಣ ಗನ್‌ಮ್ಯಾನ್ ಮತ್ತು ಡ್ರೈವರ್ ನೆರವಿನೊಂದಿಗೆ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಪ್ರಯೋಜನವಾಗಿಲ್ಲ'' ಎಂದು ರಾವ್ ಅವರ ಪುತ್ರಿ ಡಾ.ಪುಣತಿ ವಿಜಯ ಲಕ್ಷ್ಮಿ ದುಃಖ ತೋಡಿಕೊಂಡಿದ್ದಾರೆ.

**ಬಿಟ್ಟೆ ಕಿರಿಕಿರಿ:** ಗುಂಟೂರು ಜಿಲ್ಲೆಯ ಸೆಟ್ಟೇನಪಲ್ಲಿ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿ, ಎನ್.ಟಿ.ರಾಮರಾವ್ ಮತ್ತು ಚಂದ್ರಬಾಬು ನಾಯ್ಡು ಸಂಪುಟದಲ್ಲಿ ಸಚಿವರಾಗಿ, ಸ್ಪೀಕರ್ ಆಗಿ ಸೇವೆ ಸಲ್ಲಿಸಿದ್ದ ಶಿವಪ್ರಸಾದ ರಾವ್ ಅವರ ಅದೃಷ್ಟ 2019ರಿಂದ ಕೈಕೊಟ್ಟಿತು. ರಾವ್ ಅವರು ವಿಧಾನಸಭೆ ಚುನಾವಣೆಯಲ್ಲಿ ಸೋತರು. ಟಿಡಿಪಿ ಪತನಗೊಂಡು, ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಹಲವು ಭ್ರಷ್ಟಾಚಾರದ ಕೇಸ್‌ಗಳು ಇವರ ವಿರುದ್ಧ ದಾಖಲಾದವು.

ಅಧಿಕಾರದ ಕೊನೆಯಲ್ಲಿ ವಿಧಾನಸಭೆಯ ಕೋಟ್ಯಂತರ ರೂಪಾಯಿ ಮೌಲ್ಯದ ಪೀಠೋಪಕರಣಗಳನ್ನು ಬೇರೆಡೆಗೆ ಸಾಗಿಸಿದ ಆರೋಪವನ್ನು ಇವರ ವಿರುದ್ಧ ಹೊರಿಸಲಾಗಿತ್ತು. ತಾವು ಪೀಠೋಪಕರಣ ಸಾಗಿಸಿದ್ದನ್ನು ರಾವ್ ಒಪ್ಪಿಕೊಂಡಿದ್ದರು ಕೂಡ.

ಆದರೆ, ಆ ಪೀಠೋಪಕರಣಗಳು ಗುಂಟೂರಿನಲ್ಲಿರುವ ಅವರ ಪುತ್ರನ ಆಟೋಮೊಬೈಲ್ ಷೋರೂಮ್‌ನಲ್ಲಿ ಪತ್ತೆಯಾದ ಬಳಿಕ ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿದ್ದರು. ಪುತ್ರ ಶಿವರಾಮ್ ವಿರುದ್ಧ ಕೌಶಲ್ಯಾಭಿವೃದ್ಧಿ ಕೇಂದ್ರಗಳಿಂದ ಲ್ಯಾಪ್‌ಟಾಪ್‌ಗಳನ್ನು ಸಾಗಿಸಿದ ಆಪಾದನೆ ಹೊರಿಸಲಾಗಿತ್ತು. ಇಬ್ಬರ ವಿರುದ್ಧವೂ ರಾಜ್ಯ ಸರಕಾರವು ಕಳ್ಳತನದ ಪ್ರಕರಣ ದಾಖಲಿಸಿತ್ತು. ಇದರಿಂದ ತೀವ್ರ ಒತ್ತಡಕ್ಕೆ ಸಿಲುಕಿದ್ದ ಅವರು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರು. ಈ ಮೊದಲು ಒಮ್ಮೆ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಂದು ಮನೆಯವರ ಸಕಾಲಿಕ ಎಚ್ಚರದಿಂದ ಅವರು ಬದುಕುಳಿದಿದ್ದರು. ಎರಡನೇ ಯತ್ನದಲ್ಲಿ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ರಾವ್ ಅವರ ಸಾವಿಗೆ ಜಗನ್ ಸರಕಾರವೇ ನೇರ ಹೊಣೆ ಎಂದು ಟಿಡಿಪಿ ಆರೋಪಿಸಿದೆ. ಪಕ್ಷದ ಕಾರ್ಯಕರ್ತರು ಬೀದಿಗಿಳಿದು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.